# ಗರಗಸದ ಚಿತ್ರಬಂಧ!

ಇದು ಅಂತಿಂತಹ ಸಮಸ್ಯೆಯಲ್ಲ, ಪ್ರಪಂಚದ ಅತ್ಯಂತ ಬೃಹತ್ತಾದ ಗರಗಸದ ಸಮಸ್ಯೆಯನ್ನೊಳಗೊಂಡ ಚಿತ್ರಬಂಧ! ಚಿಕ್ಕದಾಗಿ ಹೇಳೋದಾದ್ರೆ ಜಿಗ್‌ಸಾ ಪಝಲ್. ಹಲಗೆಯ ಮೇಲೆ ಚಿತ್ರಗಳನ್ನು ಅಂಟಿಸಿ ಅದನ್ನು ಗರಗಸದಿಂದ ಯಾವುದೇ ನಿರ್ದಿಷ್ಟ ಆಕಾರವಿಲ್ಲದೆ ಕತ್ತರಿಸಿ, ಮತ್ತೆ ಒಂದಕ್ಕೊಂದು ಜೋಡಿಸುವ ಈ ಆಟ ಮಕ್ಕಳನ್ನು ಮಾತ್ರವಲ್ಲ, ದೊಡ್ಡವರನ್ನೂ ಕಕಮಕಗೊಳಿಸುತ್ತದೆ. ಸ್ಪೇನ್‌ನಲ್ಲಿ ಇತ್ತೀಚೆಗೆ 7X2 ಮೀಟರ್ ವಿಸ್ತೀರ್ಣದ ಬೃಹತ್ತಾದ ಚಿತ್ರಬಂಧವನ್ನು ಸತತ 48 ಗಂಟೆಗಳ ಕಾಲ ತೆಗೆದುಕೊಂಡು ಬಿಡಿಸಿದ್ದು ದೊಡ್ಡವರ ತಂಡವೇ.

ಈ ಚಿತ್ರಬಂಧವನ್ನು ರಚಿಸಿದ್ದು ಜರ್ಮನಿಯ ರಾವೆನ್ಸ್‌ಬರ್ಗರ್ ಎಂಬ ಕಂಪೆನಿ. ಒಟ್ಟು 40,320 ತುಂಡುಗಳನ್ನಾಗಿ ಮಾಡಿ ಸ್ಪೇನಿನ ಅಲ್ಜೆಸಿರಸ್ ಎಂಬ ಪ್ರಾಂತ್ಯಕ್ಕೆ ರವಾನಿಸಿತು. ಇದರಲ್ಲಿ ಭಾಗವಹಿಸುವವರು ಒಟ್ಟು 10 ಪ್ರತ್ಯೇಕ ದೃಶ್ಯಗಳನ್ನು ರಚಿಸಿ ನಂತರ ಅವುಗಳನ್ನು ಒಟ್ಟುಗೂಡಿಸಿ 7X2 ಮೀಟರ್ ಅಳತೆಯ ಸ್ತಬ್ಧಚಿತ್ರವನ್ನು ಮಾಡಬೇಕಿತ್ತು. ಚಿತ್ರಬಂಧದ ಶೀರ್ಷಿಕೆ 'ಸ್ಮರಣೀಯ ಡಿಸ್ನಿ ಘಟನೆಗಳು'. ಒಟ್ಟು 60 ಮಂದಿಯ ತಂಡ 48 ಗಂಟೆಗಳ ಕಾಲ ಪುರುಸೊತ್ತಿಲ್ಲದೇ ಕೆಲಸ ಮಾಡಿ ಈ ಚಿತ್ರಬಂಧ ಬಿಡಿಸಿ ಶಹಬಾಸ್ ಪಡೆಯಿತಂತೆ.

ಚಿತ್ರಬಂಧ ಶುರುವಾಗಿ ಸದ್ಯ 250 ವರ್ಷಗಳಾಗಿದ್ದು ಅದರ ಆಚರಣೆಯ ಅಂಗವಾಗಿ ಈ ಬೃಹತ್ ಚಿತ್ರಬಂಧ ಬಿಡಿಸುವ ಸ್ಪರ್ಧೆ ಏರ್ಪಡಿಸಿಲಾಗಿತ್ತು. ಬ್ರಿಟಿಷ್ ಭೂಪಟ ತಯಾರಕ ಜಾನ್ ಸ್ಪಿಲ್ಸ್‌ಬರಿ ಇದನ್ನು ಭೂಗರ್ಭಶಾಸ್ತ್ರ ಕಲಿಕೆಗೆಂದು ಕಂಡು ಹಿಡಿದನಂತೆ. ಸರಳತೆಗೆಂದು ಮಾಡಿದ್ದು ಈಗ ಸಮಸ್ಯೆಯಾಗಿ ಕೂತಿದೆ.

■ ಎಸ್.ಹೆಗಡೆ



